**ಸಾಕ್ಷಿಯನ್ನು ದಿನಾಂಕ 22.04.2019 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸರಿಯಾಗಿವೆ.

ಜಿ ಪಿ ಎ ನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ನಿಪಿ-1 ಎಂದು, ಸರ್ಕಾರದ ಅಧಿಸೂಚನೆ ದೃಢೀಕೃತ ನಕಲು ನಿಪಿ-2 ಎಂದು, ಕ್ರಯದ ಕರಾರು ಪತ್ರ ನಿಪಿ-3 ಎಂದು, ಸದರಿ ಕ್ರಯದ ಕರಾರು ಪತ್ರಕ್ಕೆ ಪ್ರತಿವಾದಿಯರು ಸಹಿ ಹಾಕಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ , ಸದರಿ ಸಹಿಗಳನ್ನು ಸಾಕ್ಷಿದಾರರು ಗುರುತಿಸಿದ್ದು ಅವುಗಳನ್ನು ನಿಪಿ-3 (ಎ), (ಬಿ) ಮತ್ತು (ಸಿ) ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟ ಪಹಣಿ ಹಾಜರುಪಡಿಸಿದ್ದು ನಿಪಿ-4 ಎಂದು, ಸಪ್ಲಿಮೆಂಟರಿ ಅಗ್ರಿಮೆಂಟ್ ನಿಪಿ-5 ಎಂದು, ಪ್ರತಿವಾದಿಗೆ ಕೊಟ್ಟಂತಹ ನೋಟಿಸಿನ ಪ್ರತಿ ನಿಪಿ-6 ಎಂದು, 3 ಅಂಚೆ ರಶೀದಿಗಳು ಹಾಜರುಪಡಿಸಿದ್ದು ಅವುಗಳನ್ನು ನಿಪಿ-7 ರಿಂದ 9 ಎಂದು, ಗುರುತಿಸಲಾಯಿತು. ಬ್ಯಾಲೇನಶೀಟ ಜಿರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ.

**ಪಾಟೀ ಸವಾಲುಃ** ಮುಂದೊಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ದಿವಾಣಿ ನ್ಯಾಯಾಧೀಶರು, ಸೇಡಂ.